## ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ

**ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಜಯಣ್ಣ | **ಪಿಡಬ್ಲ್ಯೂ.5** |
| **ತಂದೆಯ ಹೆಸರು** | : | ಸೂರನಾಯ್ಕ | **ಸಿಡಬ್ಲ್ಯೂ.13** |
| **ವಯಸ್ಸು** | : | **57 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ವ್ಯವಸಾಯ | **ದಿನಾಂಕ: 21.04.2018** |
| **ವಾಸಸ್ಥಳ** | : | ತ್ಯಾಗರಾಜ ನಗರ, ಚಳ್ಳಕೆರೆ | |

### ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

ಆರೋಪಿ–1 ರಾಜಣ್ಣ, 2 ರಾಜೇಶ್ವರಿ ನನಗೆ ಗೊತ್ತಿರುತ್ತಾರೆ. ನನಗೆ ಸೇರಿದ ಮನೆ ಸೈಟ್ ನಂ. 316 ಸರ್ವೆ ನಂ. 240 ಇರುತ್ತದೆ. ಅದು ಹೌಸಿಂಗ್ ಬೋರ್ಡ ಕಾಲೋನಿ, ಚಳ್ಳಕೆರೆಯಲ್ಲಿ ಇರುತ್ತದೆ. ನಾನು ಸದರಿ ಮನೆಯನ್ನು ಆರೋಪಿ–1, 2 ಇವರಿಗೆ ದಿ: 20.02.2004 ರಂದು ಬಾಡಿಗೆ ಕರಾರು ಪ್ರಕಾರ ಪ್ರತೀ ತಿಂಗಳು ರೂ. 1700/– ದರದಂತೆ ಬಾಡಿಗೆ ಕೊಟ್ಟಿದ್ದೆನು. ಸದರಿ ಮನೆ ಬಾಡಿಗೆ ಸಂಬಂದ ಆರೋಪಿತರು ನನಗೆ ರೂ. 15,000/– ಮುಂಗಡ ಹಣ ಅಂತಾ ಕೊಟ್ಟಿದ್ದರು. ಆರೋಪಿತರು ನಮ್ಮ ಚಳ್ಳಕೆರೆ ಮನೆ ಸೈಟು ನಂ. 316 ರಲ್ಲಿ ಸುಮಾರು 3 ವರ್ಷ ವಾಸವಾಗಿದ್ದು ನಂತರ ಬಿಟ್ಟು ಹೋಗಿರುತ್ತಾರೆ. ಆರೋಪಿತರು ನಮಗೆ ಕೊಡಬೇಕಾದ ಯಾವುದೇ ಬಾಕಿ ಇರುವುದಿಲ್ಲ. ಅದೇ ರೀತಿ ಆರೋಪಿತರಿಗೆ ಕೊಡಬೇಕಾದ ರೂ. 15,000/– ಮುಂಗಡ ಹಣ ಮರಳಿ ಕೊಟ್ಟಿರುತ್ತೇನೆ. ಈಗ ತೋರಿಸಿದ ಬಾಡಿಗೆ ಕರಾರು ಪತ್ರ ನೋಡುತ್ತಿದ್ದೇನೆ. ಅದೇ ಆಗಿರುತ್ತದೆ. ಅದನ್ನು ನಿಪಿ–10 ಅಂತಾ ಗುರುತಿಸಲಾಯಿತು.

### ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದ: ಪಾಟೀ ಸವಾಲು:

2. ಸದರಿ ಮನೆಗೆ ಸಂಬಂಧಿಸಿದ ನೀರು, ಕರೆಂಟ್ ಬಿಲ್ ನಾವು ಕಟ್ಟಬೇಕಾಗುತ್ತದೆ ಅನ್ನುವುದು ಸುಳ್ಳು . ಏಕೆಂದರೆ ಬಾಡಿಗೆದಾರರು ಕಟ್ಟಬೇಕಾಗುತ್ತದೆ . ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ . ಅದರಲ್ಲಿ ಬಾಡಿಗೆ ದರ ತಿಂಗಳಿಗೆ ರೂ. 1,500/– ಅಂತಾ ಹೇಳಿರುವುದಿಲ್ಲ . ಆ ಹೇಳಿಕೆಯ ಭಾಗವನ್ನು ನಿಡಿ–1 ಅಂತಾ ಗುರುತಿಸಲಾಯಿತು . ಅದೇ ರೀತಿ ಮುಂಗಡ ಹಣ ರೂ. 10,000/– ಅಂತಾ ನಾನು ಹೇಳಿರುವುದಿಲ್ಲ . ಆ ಭಾಗವನ್ನು ನಿಡಿ–1 ಎ ಅಂತಾ ಗುರುತಿಸಲಾಯಿತು . ಸಾಕ್ಷಿ ಹೇಳುತ್ತಾರೆ . ಬಾಡಿಗೆ ಮೊತ್ತ ಮತ್ತು ಮುಂಗಡದ ಮೊತ್ತ ಪೋಲೀಸರು ಹೇಳಿಕೆಯಲ್ಲಿ ತಪ್ಪಾಗಿ ಬರೆದಿದ್ದಾರೆ . ಆದರೆ ನಿಪಿ–10 ಕರಾರು ಪತ್ರದಲ್ಲಿ ಬರೆದಿರುವ ವಿಷಯ ಸರಿ ಇದೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿತ್ರದುರ್ಗ.**